ರಾಜ್ಯದಲ್ಲಿ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಮತ್ತು ಇತರೆ ಅಖಿಲ ಭಾರತ ಸೇವೆಗಳ ವೃಂದ ಬಲವನ್ನು ನಿಗದಿ ಪಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 7(429)

ಸದಸ್ಯರ ಹೆಸರು: ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಪ್ರಶ್ನೆ

ಅ. ರಾಜ್ಯದಲ್ಲಿ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಮತ್ತು ಇತರೆ ಅಖಿಲ ಭಾರತ ಸೇವೆಗಳ ವೃಂದ ಬಲವನ್ನು ನಿಗಧಿಪಡಿಸಲು ಇರುವ ಅಳತೆಗೋಲು ಏನು?

ಆ. ಸರ್ಕಾರವು ರಾಜ್ಯ ಸರ್ಕಾರದ ಅಧಿಕಾರಿಗಳ ಸಾಮರ್ಥ್ಯವನ್ನು ರುಜುವಾತುಪಡಿಸುವ ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ಬದಲಿಸಲು ಉದ್ದೇಶಿಸಿದೆಯೇ?

ಇ. ರಾಜ್ಯ ವೃಂದದ ಅಧಿಕಾರಿಗಳನ್ನು ಸರ್ಕಾರದ ಕಾರ್ಯದರ್ಶಿಗಳ ಹುದ್ದೆಗಳಿಗೆ ನೇಮಕ ಮಾಡದಿರುವ ಕಾರಣ?

ಉತ್ತರ

ಅ. ಈ ಕೆಳಕಂಡ ಉಪಯುಕ್ತತೆಗಳನ್ನು ಗಣನೆಗೆ ತೆಗೆದುಕೊಂಡು ವೃಂದ ಬಲವನ್ನು ನಿಗಧಿಗೊಳಿಸಲಾಗುವುದು:

ಅ) ವೃಂದದ ಹಿಂದಿನ ವಿಸ್ತರಣೆಯ ಪ್ರಮಾಣ.

ಆ) ಪಂಚವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಹೆಚ್ಚುವರಿ ಹುದ್ದೆಗಳು.

ಇ) ಸರ್ಕಾರದ ಹೆಚ್ಚುತ್ತಿರುವ ವ್ಯವಹಾರ.

ಆ. ಇಲ್ಲ

ಇ. ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್.ಗಳ ವೃಂದ ಬಲವನ್ನು ಸ್ಥಾಪನೆ ಮಾಡುವ ಸಮಯದಲ್ಲಿ ಸರ್ಕಾರದ ಕಾರ್ಯದರ್ಶಿಗಳ ಹುದ್ದೆಗಳನ್ನು ಒಳಗೊಂಡಂತೆ ಎಲ್ಲಾ ಆಡಳಿತ ಇಲಾಖೆಗಳ ಉನ್ನತ ಹುದ್ದೆಗಳನ್ನು ತಾಂತ್ರಿಕ: ಪರಿಣಿತ ಇಲಾಖೆಗಳು

ಅಂದರೆ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಕಾನೂನು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಇಲಾಖೆಗಳನ್ನು ಹೊರತು ಪಡಿಸಿ ಐ.ಎ.ಎಸ್. ವೃಂದದಲ್ಲಿ ಸೇರಿಸಲು ನಿರ್ಣಯಿಸಲಾಗಿದೆ. ಆದ್ದರಿಂದ ಮೇಲೆ ತಿಳಿಸಿದ ತಾಂತ್ರಿಕ: ಪರಿಣಿತ ಇಲಾಖೆಗಳನ್ನು ಹೊರತುಪಡಿಸಿ ಬೇರೆ ಇಲಾಖೆಗಳಲ್ಲಿ ಅಖಿಲ ಭಾರತ ಅಧಿಕಾರಿಗಳಲ್ಲದವರನ್ನು ಸರ್ಕಾರದ ಕಾರ್ಯದರ್ಶಿ ಹುದ್ದೆಗಳಿಗೆ ನೇಮಿಸಲಾಗುವುದಿಲ್ಲ.

ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3(430)

ಸದಸ್ಯರ ಹೆಸರು: ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

1. ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಯಾವ ದಿನಾಂಕದಂದು ರಚಿಸಲಾಯಿತು.

2. ಇಲ್ಲಿಯವರೆಗೂ ಆಯೋಗವು ಖರ್ಚು ಮಾಡಿದ ಒಟ್ಟು ಹಣವೆಷ್ಟು?

3. ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಇಲ್ಲಿಯವರೆಗೂ ನೀಡಿರುವ ವರದಿಗಳ ಒಟ್ಟು ಸಂಖ್ಯೆ?

4. ರಾಜ್ಯ ಆಡಳಿತವನ್ನು ಸುಧಾರಣೆಗಾಗಿ ಆಯೋಗವು ಮಾಡಿರುವ ಶಿಫಾರಸ್ಸುಗಳು ಯಾವುವು?

5. ಈ ಶಿಫಾರಸ್ಸುಗಳ ಮೇಲೆ ರಾಜ್ಯ ಸರ್ಕಾರವು ಇಲ್ಲಿಯತನಕ ತೆಗೆದುಕೊಂಡ ಕ್ರಮಗಳೇನು?

ಉತ್ತರ

1. ದಿನಾಂಕ: 17-4-2000

2. ರೂ.67,94,227